ನಮ್ಮ ನಾರಾಯಣನಿಗೆ ಮದುವೆ ಮಾಡಿದ್ವಿ. ಮೂರು ತಿಂಗಳ ಹಿಂದೆ ಸೊಸೆಗೆ ಡೆಲಿವರಿಯಾಗಿದೆ. ಮೊಮ್ಮಗ ಹುಟ್ಟಿದ್ದಾನೆ. ಗೋಕರ್ಣದ ಆ ಕಡೆ ಹನೇಹಳ್ಳಿ ತವರು. ಹಾಗಾಗಿ ಮನೆಯಲ್ಲೀಗ ಹೆಂಗಸರು ಕಾಣಿಸಿಕೊಳ್ಳುತ್ತಿಲ್ಲ. ನಮ್ಮ ಮನೆಯಲ್ಲಿ ಇಪ್ಪತ್ತು ವರ್ಷಗಳಿಂದಲೂ ಅಡುಗೆ ಮಾಡಿಕೊಂಡಿರುವ ಜನಾರ್ದನ ಬಾಳಿಗನ ಅಡುಗೆಯ ರುಚಿಯ ಮುಂದೆ ಹೆಂಗಸರ ಅಡುಗೆ ರುಚಿ ಏನೇನು ಅಲ್ಲ' ಎಂದಿದ್ದ. ನಾನು ಇಡ್ಲಿ, ದೋಸೆ ಎರಡನ್ನೂ ಬಾಯಿಗಿಟ್ಟುಕೊಂಡಿದ್ದೆ. ಜಿ.ವಿ. ಹೆಗಡೆಯ ಮಾತುಗಳಲ್ಲಿ ಅತಿಶಯೋಕ್ತಿಯೇನೂ ಇಲ್ಲ ಅನ್ನಿಸಿತ್ತು. ಹೆಗಡೆ ಇಡ್ಲಿಯನ್ನು ಮುರಿದು ಬಾಯಿಗಿಟ್ಟುಕೊಂಡು, 'ಎಷ್ಟು ಜನ್ಮ ಕಳೆದರೂ ನಿನ್ನ ಋಣ ತೀರಿಸಲಿಕ್ಕೆ ಆಗೋದಿಲ್ಲ' ಎಂದಿದ್ದ. 'ನಿನ್ನ ಮಾತು ಅರ್ಥವಾಗಲಿಲ್ಲ' ಎಂದಿದ್ದೆ. ನಿಜಕ್ಕೂ ಅವನ ಮಾತುಗಳು ಅರ್ಥವಾಗಿರಲಿಲ್ಲ ನನಗೆ. 'ಅವೊತ್ತು ರಾತ್ರಿ ಪೊಲೀಸ್ ಸ್ಟೇಷನ್ನಿನಲ್ಲಿ ಬುದ್ಧಿ ಉಪಯೋಗಿಸಿ ನೀನು ನನಗೆ ನಿನ್ನ ಅನ್ನವನ್ನು ಕೊಡದೇ ಹೋಗಿದ್ದಿದ್ದರೆ ಖಂಡಿತವಾಗಿಯೂ ನಾನು ಸತ್ತೇ ಹೋಗುತ್ತಿದ್ದೆ. ಇಷ್ಟೆಲ್ಲಾ ವರ್ಷಗಳ ನಂತರ ನಿನ್ನನ್ನು ಹೀಗೆ ನೋಡುವ ಸಂದರ್ಭವೂ ಒದಗಿ ಬರುತ್ತಿರಲಿಲ್ಲ' ಮಾತುಗಳೊಂದಿಗೆ ಜಿ.ವಿ. ಹೆಗಡೆಯ ಕಣ್ಣಲ್ಲಿ ಸಣ್ಣಗೆ ನೀರು ಇಣುಕಿತ್ತು. 'ಇರಲಿ ಬಿಡು ಇಷ್ಟೆಲ್ಲಾ ವರ್ಷಗಳ ನಂತರ ಆ ಅನಿಷ್ಟದ ಘಳಿಗೆಗಳನ್ನು ಯಾವ ಪುರುಷಾರ್ಥಕ್ಕಾದರೂ ನೆನೆಸಿಕೊಳ್ಳಬೇಕು?' ಎಂದು ಸಮಾಧಾನ ಪಡಿಸಿದರೂ ಅವನ ಮಾತುಗಳು ನನ್ನನ್ನು ನಲವತ್ತೇಳು ವರ್ಷಗಳ ಹಿಂದಕ್ಕೆ ಎಳೆದುಕೊಂಡು ಹೋಗಿ ಮೈ ಜುಂ ಎನ್ನುವಂತೆ ಮಾಡಿದ್ದವು. ತಿಂಡಿ ತಿನ್ನುವುದು ಮುಗಿದು ಕೈತೊಳೆಯುವಾಗ, 'ನೋಡು ಈಗ ಇಲ್ಲಿ ಕೈ ತೊಳೆಯುವಾಗ ಆ ಸಂದರ್ಭದಲ್ಲಿ ಪೊಲೀಸ್ ಸ್ಟೇಷನ್ ಸೆಲ್‌ನಲ್ಲಿ ನಡೆದ ಇನ್ನೊಂದು ಘಟನೆ ನೆನಪಾಗ್ತಿದೆ. ನಿನ್ನನ್ನು ಸ್ಟೇಷನ್ನಿನ ಸೆಲ್ಲಿಂದ ಕಳುಹಿಸಿದ ನಂತರ ಅಂದೇ ಮಧ್ಯಾಹ್ನ ಪರುಶುರಾಮ ಗೌಡನನ್ನೂ ಬಿಟ್ಟು ಕಳಿಸಿದ್ದರು. ಅವತ್ತು ರಾತ್ರಿ ನನಗೂ ಮತ್ತು ಪ್ರಮೋದ್ ಶಾಸ್ತ್ರಿಗೂ ತಲಾ ಒಂದೊಂದು ಬಿಸಿಬಿಸಿ ಮಸಾಲೆ ದೋಸೆಯನ್ನು ತರಿಸಿಕೊಟ್ಟಿದ್ದರು. ಬೆಳಿಗ್ಗೆಯಿಂದ ಏನನ್ನೂ ತಿನ್ನಲು ಕೊಟ್ಟಿರದಿದ್ದ ಕಾರಣ ನನಗೆ ಅಂಥ ಇನ್ನೆರಡು ದೋಸೆ ತಿನ್ನುವ ಹಸಿವು ಮತ್ತು ಆಸೆ ಎರಡೂ ಉಂಟಾಗಿದ್ದವು. ಹೊಟ್ಟೆ ಹಸಿಯುತ್ತದೆಂದೂ ನನಗೆ ಇನ್ನೊಂದು ದೋಸೆ ಬೇಕೆಂದು ಬಾಯಿ ಬಿಟ್ಟು ಕೇಳಿಬಿಟ್ಟೆ. ಎಸ್.ಐ ಸೆಲ್ ಬಾಗಿಲ ಬಳಿ ನಿಂತು ನಗುತ್ತಾ 'ದೇಶ ಭಕ್ತರಿಗೆ ಹೊಟ್ಟೆ ಹಸಿವು ಆಗುತ್ತೆ ಅಂದ್ರೆ ಆಶ್ಚರ್ಯ ಆಗುತ್ತೆ. ಗಾಂಧಿ ವಾರಗಟ್ಟಲೆ ಉಪವಾಸ ಇರ್ತಿದ್ರಂತೆ. ನೀನು ನೋಡಿದ್ರೆ...' ಎಂದು ನಕ್ಕಿದ್ದ. ಸಡನ್ನಾಗಿ ಪ್ರಮೋದ್ ಶಾಸ್ತ್ರಿ 'ಗಾಂಧಿಯ ಹೆಸರು ಹೇಳಲೂ ಲಾಯಕ್ಕಾದವನಲ್ಲ ನೀನು. ರಾಜಕಾರಣಿಗಳು ಸಾಕಿದ ನಾಯಿಯೇ ಇರಬೇಕು. ನೀನು ರಕ್ಷಕನೋ ರಾಕ್ಷಸನೋ. ಇಷ್ಟಕ್ಕೂ ನಾವು ಮಾಡಿದ ತಪ್ಪೇನು ಬೊಗಳು' ಎಂದು ಸಿಟ್ಟಿನಿಂದ ಮೈಮೇಲೆ ದೆವ್ವ ಬಂದವನಂತೆ ಮಾತನಾಡಿಬಿಟ್ಟಿದ್ದ. ಮಾತನಾಡದೆ ಅಲ್ಲಿಂದ ತೆರಳಿದ ಎಸ್ ಐ ಇಬ್ಬರು ಪೇದೆಗಳೊಂದಿಗೆ ಹನ್ನೊಂದು ಗಂಟೆ ಸಮಯದಲ್ಲಿ ನಾವು ತೂಕಡಿಸಲು ಶುರುಮಾಡಿದಾಗ ಸೆಲ್ ಪ್ರವೇಶಿಸಿದ್ದ. ಪ್ರಮೋದ್ ಶಾಸ್ತ್ರಿಯ ಕೈಕಾಲು ಕಟ್ಟಿ ಬಾಯಿಗೆ ಬಟ್ಟೆ ತುರುಕಿ ಏರೋಪ್ಲೇನ್ ಎತ್ತಿದ್ದರು. ಶಾಸ್ತ್ರಿ ಪ್ಯಾಂಟಿನಲ್ಲೇ ಜುಳ ಜುಳ ಉಚ್ಚೆ ಮಾಡಿಕೊಂಡಿದ್ದ. ಅದನ್ನು ನೋಡಿ ನನಗೂ ಬಹಿರ್ದೆಸೆ ಕಿತ್ತುಕೊಂಡಿತ್ತು. ಸ್ಟೇಶನ್ನಿನ ಲ್ಯಾಟ್ರಿನ್ ರೂಮಿಗೆ ಕಳಿಸಿದ್ದರು. ಬಹಿರ್ದೆಸೆ ಮುಗಿಸಿ ಅರ್ಧ ತೊಳೆದುಕೊಂಡಿದ್ದೆ, ನಲ್ಲಿಯಲ್ಲಿ ನೀರು ನಿಂತು ಹೋಗಿತ್ತು...' ಹೆಗಡೆ ಮಾತು ನಿಲ್ಲಿಸಿ ಒಂದು ನಿಮಿಷ ಕಣ್ಮುಚ್ಚಿ, 'ಅದೆಲ್ಲ ಬಾಯಲ್ಲಿ ಹೇಳಲಿಕ್ಕಾಗಲ್ಲ ಬಿಡು. ಮಾರನೆಯ ದಿನ ಬೆಳಿಗ್ಗೆ ಪ್ರಮೋದ್ ಶಾಸ್ತ್ರಿ ಹುಷಾರು ತಪ್ಪಿರುವನೆಂದು ಹೇಳಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲು ಜೀಪಿನಲ್ಲಿ ಕರೆದುಕೊಂಡು ಹೋಗಿದ್ದರು. ಮಧ್ಯಾಹ್ನದ ಹೊತ್ತಿಗೆ ಮಂಗಳೂರಿನಿಂದ ಲಾಯರ್ ಜೊತೆಗೂಡಿ ನನ್ನ ಅಪ್ಪ ಬಂದಿದ್ದ. ನನ್ನನ್ನು ಬಿಡಿಸಿಕೊಂಡು ಕಾರಲ್ಲಿ ಕೂರಿಸಿಕೊಂಡು ಹೋಗಿಬಿಟ್ಟ. ನಮ್ಮ ಯಾರ ಮೇಲೂ ಎಫ್ ಐ ಆರ್ ದಾಖಲಾಗಿರಲಿಲ್ಲ. ಅಷ್ಟೇಕೆ ನಮ್ಮನ್ನು ಅರೆಸ್ಟ್ ಮಾಡಿ ಸ್ಟೇಷನ್ ನಲ್ಲಿ ಇಟ್ಟ ಯಾವ ದಾಖಲೆಯೂ ಇರಲಿಲ್ಲ! ನಾನು ಮುಂದೆ ಎಲ್ ಎಲ್ ಬಿ ಮಾಡಿ ಪ್ರಾಕ್ಟೀಸ್ ಪ್ರಾರಂಭಿಸಿದೆ. ಮಗನನ್ನೂ ಲಾ ಓದಿಸಿದೆ. ಬಿಡು ಮಾತನಾಡುವುದು ತುಂಬಾ ಇದೆ. ಇವೊತ್ತು ನಮ್ಮ ನಾರಾಯಣನ ಜೊತೆ ತದಡಿ, ಗೋಕರ್ಣ ಸುತ್ತಿಕೊಂಡು ಬಾ. ಮಳೆ ಬಿಡುವು ಕೊಟ್ಟಂತಿದೆ. ಏನಾದರೂ ತಗೋತಿಯೋ ಹೇಗೆ? ಇವೊತ್ತು ನನ್ನ ಜೊತೆ ವಿಸ್ಕಿ ಕುಡಿಬೇಕು. ನಾನು